VIJAYAKUMAR KANNUR
Digitally signed by VIJAYAKUMAR KANNUR
Date: 2025.07.23 16:25:57 +0530



**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ</u>**

**<u>ಸಾಕ್ಷಿಗೆ ಇಂದು ದಿನಾಂಕ 23.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ LSD ವಕೀಲರಿಂದ :</u>**

ನಾನು ಖಾಯಂ ಆಗಿ ಬಂಟ್ನೂರು ಗ್ರಾಮದಲ್ಲಿ ವಾಸವಾಗಿರುವೆನು. ನಾನು 2 ನೇ ಪಿಯುಸಿ ಯವರೆಗೆ ವಿದ್ಯಾಭ್ಯಾಸ ಮಾಡಿರುವೆನು. ಈಗ ನನಗೆ 36 ವರ್ಷ ವಯಸ್ಸು ಆಗಿರುವವು. ನನ್ನ ಜನ್ಮ ದಿನಾಂಕ 10.06.1989.

2. ಈ ದಾವೆ ದಾಖಲು ಮಾಡಿರುವ ವಾದಿಯರು ನನಗೆ ಯಾವುದೇ ರೀತಿಯಿಂದ ಸಂಬಂಧಿಗಳು ಆಗಿರುವುದಿಲ್ಲ. ಈ ದಾವೆಯ ಬಗ್ಗೆ ನನಗೆ ವೈಯಕ್ತಿಕವಾಗಿ ಹಾಗೂ ನಮ್ಮ ಗ್ರಾಮದಲ್ಲಿ ಜನರು ಮಾತನಾಡುತ್ತಿರುವುರಿಂದ ನನಗೆ ಮಾಹಿತಿ ಇರುವುದು. ನನ್ನ ಸಾಕ್ಷಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿ ಹಾಕಿರುವ ಸಂಗತಿಗಳ ಬಗ್ಗೆ ನನಗೆ ವೈಯಕ್ತಿಕವಾದ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

3. ಸರ್ವೇ ನಂಬರ್ 12/9 ರ ಆಸ್ತಿಗೆ ಸಂಬಂಧಪಟ್ಟಂತೆ ಪ್ರತಿವಾದಿಯರು ವಾದಿಯರ ಸಹಿಗಳನ್ನು ಖೊಟ್ಟಿಯಾಗಿ ಮಾಡಿಸಿಕೊಂಡಿರುವುದಾಗಿ ಎಂದು ಹೇಳಿ ವಾದಿಯರು ಈ ದಾವೆಯನ್ನು ದಾಖಲು ಮಾಡಿರುವರು. ವಾದಿ 2 ರವರ ಮದುವೆಯಾಗಿ ಈಗ ಸುಮಾರು 20 ವರ್ಷಕ್ಕಿಂತ ಹೆಚ್ಚಿಗೆ ಆಗಿದೆ ಎಂದರೆ ಸರಿ . ಇವರು ಕಳೆದ 20 ವರ್ಷಗಳಿಂದಲೂ ತಮ್ಮ ಗಂಡನ ಮನೆಯಲ್ಲಿ ವಾಸವಾಗಿರುವರು ಎಂದರೆ ಸರಿ, ಆದರೆ ಅವರು ಹೋಗಿ ಬಂದು ಸಹ ಮಾಡುತ್ತಿರುವರು.

4. ದಾವಾ ಆಸ್ತಿಯ ಸರ್ವೇ ನಂಬರ್ 12/6 ವಿಸ್ತೀರ್ಣ 28 ಗುಂಟೆ , 12/9 ವಿಸ್ತೀರ್ಣ 3 ಎಕರೆ 5 ಗುಂಟೆ ಮತ್ತು 66/1 ವಿಸ್ತೀರ್ಣ 5 ಎಕರೆ 21 ಗುಂಟೆ ಇರುವವು. ನನ್ನ

ಮಾಲೀಕತ್ವದ ಜಮೀನುಗಳು ಈ ದಾವಾ ಜಮೀನಿನ ಹತ್ತಿರದಲ್ಲಿ ಇರುವುದಿಲ್ಲ , ಆದರೆ ಸರ್ವೇ ನಂಬರ್ 12/9 ರ ಜಮೀನಿನ ಹತ್ತಿರ ಇರುವ ಸುರೇಶ ಹಣಮಂತ ನಾಯಕ ಇವರ ಜಮೀನಾದ ಸರ್ವೇ ನಂಬರ್ 12/16 ರ ಜಮೀನನ್ನು ನಾನು ಸಮಪಾಲಿನ ಆಧಾರದ ಮೇರೆಗೆ ಸಾಗುವಳಿ ಮಾಡುತ್ತಿರುವೆನು. ಈ ಜಮೀನನ್ನುನಾನು ಸಾಗುವಳಿ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಈ ಸಂಗತಿಯನ್ನು ಹೇಳಿ ಬರೆಸಿರುವುದಿಲ್ಲ. ನಾನು ಸರ್ವೇ ನಂಬರ್ 12/16 ರ ಜಮೀನನ್ನು ಸಾಗುವಳಿ ಮಾಡುತ್ತಿರುವುದಾಗಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 12/9 ರ ಜಮೀನನ ಚೆಕ್ಕು ಬಂದಿ ಪೂರ್ವಕ್ಕೆ ಸಂಗಣ್ಣ ಹಣಮಂತ ಛತ್ತರಗಿ, ಪಶ್ಚಿಮಕ್ಕೆ ಸುರೇಶ ಹಣಮಂತ ನಾಯಕ, ಉತ್ತರಕ್ಕೆ ಭೀಮಪ್ಪ ಕಟಗೇರಿ ಮತ್ತು ದಕ್ಷಿಣಕ್ಕೆ ಲಚ್ಚಪ್ಪ ಸಿಂಗರೆ ಇವರ ಜಮೀನು ಇರುವುದು. ಸರ್ವೇ ನಂಬರ್ 66/1 ರ ಜಮೀನಿನ ಚೆಕ್ಕು ಬಂದಿ ನನಗೆ ಗೊತ್ತಿರುವುದಿಲ್ಲ.

5. ಸರ್ವೇ ನಂಬರ್ 12/9 ಮತ್ತು 66/1 ರ ಜಮೀನನ್ನು ವಾದಿಯರು ಸಾಗುವಳಿ ಮಾಡುತ್ತಿರುವರು. ಸರ್ವೇ ನಂಬರ್ 66/1 ರ ಜಮೀನಿನಲ್ಲಿ ವಾದಿಯರು ಮನೆ ಕಟ್ಟಿಕೊಂಡು ಅಲ್ಲೇ ವಾಸವಾಗಿರುವರು. ಈ ಸಂಗತಿ ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. ಸರ್ವೇ ನಂಬರ್ 12/6 ಮತ್ತು 12/9 ರ ಜಮೀನುಗಳ ಖರೀದಿ ಕರಾರು ಪತ್ರ ಪ್ರತಿವಾದಿ 1 ಮತ್ತು 2 ರವರ ಜೊತೆ 2003 ರಲ್ಲಿ ಆಗಿರುವುದು. ಆ ಖರೀದಿ ಕರಾರು ಪತ್ರವನ್ನು ನಾನು ನೋಡಿರುವುದಿಲ್ಲ. ಆ ಸಮಯದಲ್ಲಿ ನಾನು ಖುದ್ದಾಗಿ ಹಾಜರು ಇರಲಿಲ್ಲ. ವಾದಿಯರು ಮತ್ತು ಪ್ರತಿವಾದಿಯ ಮಧ್ಯೆ ಆ ಖರೀದಿ ಕರಾರು ಮಾಡಿಕೊಳ್ಳುವ ಸಮಯದಲ್ಲಿ ಆಗಿರುವ ಮಾತುಕತೆ ಮತ್ತು ಕರಾರುಗಳ ಬಗ್ಗೆ ನನಗೆ ವೈಯಕ್ತಿಕವಾಗಿ ಮತ್ತು ಸ್ವಂತಕ್ಕೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಈ ಖರೀದಿ ಕರಾರು ಪತ್ರದ ಪ್ರಕಾರ ವಾದಿಯರು ಪ್ರತಿವಾದಿಯರೊಂದಿಗೆ ನಡೆದುಕೊಂಡಿರುವರು. ಸರ್ವೇ ನಂಬರ್ 12/6 ರ ಜಮೀನನ್ನು ಪ್ರತಿವಾದಿಯರಿಗೆ ವಾದಿಯರು ಮಾರಾಟ ಮಾಡಿರುವರು. ಆ ಖರೀದಿ ಕರಾರು ಪತ್ರದಲ್ಲಿ ಸರ್ವೇ ನಂಬರ್ 12/6 ಮತ್ತು 12/9 ರ ಜಮೀನುಗಳನ್ನು

2003 ರಲ್ಲೇ ಪ್ರತಿವಾದಿಯರಿಗೆ ಕಬ್ಜೆ ಕೊಟ್ಟಿರುವುದಾಗಿ ಎಂದು ಬರೆಸಿರುವರು ಎಂದರೆ ಅದು ಖೊಟ್ಟಿಯಾಗಿ ಬರೆಸಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ಆ ಖರೀದಿ ಕರಾರುಪತ್ರದ ಪ್ರಕಾರ ಪ್ರತಿವಾದಿಯರು ವಾದಿಯರಿಗೆ ರೂ. 68,003/- ಮುಂಗಡವಾಗಿ ನೀಡಿರುವರು ಎಂದರೆ ಸರಿಯಲ್ಲ. 2003 ರ ಖರೀದಿ ಕರಾರು ಪತ್ರ ಖೊಟ್ಟಿಯಾಗಿ ಇರುವುದು ಎಂದು ನಾನು ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿ ಹಾಕಿರುವುದಿಲ್ಲ.

6. ದಿಃ 23.08.2004 ರಂದು ನೊಂದಾಯಿತ ಖರೀದಿ ಪತ್ರವನ್ನು ಮುಧೋಳದ ಉಪನೊಂದಣಿ ಕಚೇರಿಯಲ್ಲಿ ನೊಂದ ಮಾಡುವ ಸಮಯಲ್ಲಿ ನಾನು ಹಾಜರು ಇರಲಿಲ್ಲ. ನಾನು ಆ ದಿನ ಹಾಜರು ಇರದೇ ಇರುವುದರಿಂದ ಆ ಮಾತುಕತೆಯ ಬಗ್ಗೆ ನನಗೆ ಸ್ವಂತಕ್ಕೆ ಮಾಹಿತಿ ಇರುವುದಿಲ್ಲ ಎಂದರೆ ಸರಿ, ಆದರೆ ಜನರಿಂದ ಮತ್ತು ನನ್ನ ತಂದೆಯಿಂದ ತಿಳಿದುಬಂದಿರುವುದು ಏನೆಂದರೆ ಅದು ಖೊಟ್ಟಿಯಾಗಿ ಇರುವುದು. ದಿಃ 23.08.2004 ರಂದು ವಾದಿಯರು ಈ ನೊಂದಾಯಿತ ಖರೀದಿ ಪತ್ರದಲ್ಲಿನ ಸಂಗತಿಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುವರೋ ಅಥವಾ ಇಲ್ಲ ಎಂಬ ಬಗ್ಗೆ ನನಗೆ ಸ್ವಂತಕ್ಕೆ ಮಾಹಿತಿ ಇರುವುದಿಲ್ಲ ಎಂದರೆ ಸರಿ, ಆದರೆ ವಾದಿಯರು ಅನಕ್ಷರಸ್ಥರು ಅಗಿರುವರು ಎಂದು ಸಾಕ್ಷಿ ಉತ್ತರಿಸುವರು.

7. ನನ್ನ ತಂದೆಯ ಪೂರ್ಣ ಹೆಸರು ದುಂಡಪ್ಪ ಖುಲ್ಲಪ್ಪ ಬಸವನಾಯಕ. ಈ ನೊಂದಾಯಿತ ಖರೀದಿ ಪತ್ರವನ್ನು ಪ್ರತಿವಾದಿಯರು ಖೊಟ್ಟಿಯಾಗಿ ಮಾಡಿಕೊಂಡಿರುವರು ಎಂದು ನನ್ನ ತಂದೆ 2004 ನೇ ಸಾಲಿನಲ್ಲಿ ಹೇಳಿರುವರು. ನನ್ನ ತಂದೆಗೆ ಈ ಸಂಗತಿಯನ್ನು ನನ್ನ ಚಿಕ್ಕಪ್ಪನಾದ ಶಿವಪ್ಪ ಹೇಳಿರುವನು. ಖೊಟ್ಟಿ ಖರೀದಿ ಪತ್ರವನ್ನು ಬರೆದುಕೊಂಡ ಸಂಗತಿ 2004 ರಲ್ಲಿ ವಾದಿಯರಿಗೆ ಗೊತ್ತಿರಲಿಲ್ಲ, ಆದರೆ ನನ್ನ ಚಿಕ್ಕಪ್ಪನಿಗೆ ಗೊತ್ತಿತ್ತು. ಈ ಸಂಗತಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. ಪ್ರತಿವಾದಿಯರು ವಾದಿಯ ಕಡೆಯಿಂದ ಸರ್ವೇ ನಂಬರ್ 12/6 ರ ಜಮೀನನ್ನು ಖರೀದಿ ಮಾಡುವುದಾಗಿ ಎಂದು ಹೇಳಿ

ಈ ಜಮೀನಿನ ಜೊತೆ ಸರ್ವೇ ನಂಬರ್ 66/1 ರ ಜಮೀನನ್ನು ಸಹ ಖೊಟ್ಟಿಯಾಗಿ ಖರೀದಿ ಮಾಡಿರುವರು. ಸರ್ವೇ ನಂಬರ್ 12/9 ರ ಜಮೀನು ವಾದಿ 1 ರವರ ಹೆಸರಿನಲ್ಲಿ ಇರುವುದು. ಈ ಜಮೀನು ನೀರಾವರಿ ಜಮೀನು ಎಂದರೆ ಸರಿ , ಇದರ ವಿಸ್ತೀರ್ಣ 3 ಎಕರೆ 5 ಗುಂಟೆ ಎಂದರೆ ಸರಿ. ಈ ಜಮೀನಿಗೆ ಹೊಂದಿಕೊಂಡು ಪ್ರತಿವಾದಿಯರ ಮಾಲೀಕತ್ವದ ಬೇರೆ ಬೇರೆ ಜಮೀನುಗಳು ಇರುವವು ಎಂದರೆ ಸರಿಯಲ್ಲ, ಆದರೆ ಪ್ರತಿವಾದಿಯರ ಮಾಲೀಕತ್ವದ ಬೇರೆ ಜಮೀನುಗಳು ಈ ಜಮೀನಿನ ಹತ್ತಿರದಲ್ಲಿ ಇರುವವು. ಸರ್ವೇ ನಂಬರ್ 66/1 ರ ಜಮೀನು ಪ್ರತಿವಾದಿಯರ ಮಾಲೀಕತ್ವದ ಬೇರೆ ಜಮೀನುಗಳಿಂದ ದೂರದಲ್ಲಿ ಇರುವುದು ಎಂದರೆ ಸರಿ.

8. ಸರ್ವೇ ನಂಬರ್ 66/1 ರ ಜಮೀನಿನಲ್ಲಿ ಪ್ರತಿವಾದಿಯರು 3 ಎಕರೆ ಜಮೀನನ್ನು ಖರೀದಿ ಮಾಡಿರುವರು ಎಂದರೆ ಸರಿಯಲ್ಲ. ಈ ಜಮೀನಿನ ಒಟ್ಟು ವಿಸ್ತೀರ್ಣ 5 ಎಕರೆ 21 ಗುಂಟೆ ಇರುವುದು ಎಂದು ಸಾಕ್ಷಿ ಉತ್ತರಿಸುವರು. 2003 ರಲ್ಲಿ ವಾದಿ ಮತ್ತು ಪ್ರತಿವಾದಿಯರ ನಡುವೆ ಆದ ಖರೀದಿ ಕರಾರು ಪತ್ರದ ಪ್ರಕಾರ ಸರ್ವೇ ನಂಬರ್ 12/6 ಮತ್ತು 12/9 ರ ಜಮೀನುಗಳು ಪ್ರತಿವಾದಿಯರ ಕಬ್ಜೆಯಲ್ಲಿ ಇರುವವು ಎಂದರೆ ಸರಿಯಲ್ಲ. ಸರ್ವೇ ನಂಬರ್ 12/6 ರ ಜಮೀನು ಮಾತ್ರ ಪ್ರತಿವಾದಿಯರ ಕಬ್ಜೆಯಲ್ಲಿ ಇರುವುದು ಎಂದು ಸಾಕ್ಷಿ ಉತ್ತರಿಸುವರು. 2004 ರಲ್ಲಿ ಸರ್ವೇ ನಂಬರ್ 66/1 ರ ಜಮೀನಿನಲ್ಲಿ 3 ಎಕರೆ ಜಮೀನನ್ನು ಪ್ರತಿವಾದಿಯರು 1 ಲಕ್ಷ 73 ಸಾವಿರಕ್ಕೆ ಖರೀದಿ ಮಾಡಿರುವರು ಅದಿನಿಂದಲೇ ಪ್ರತಿವಾದಿಯರು ಈ ಜಮೀನಿನ ಕಬ್ಜೆ ಹೊಂದಿರುವರು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ನಾನು ಇದರೇ ಇರುವುದರಿಂದ ಈ ದಾವಾ ಆಸ್ತಿಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

9. ವಾದಿಯರು ಪ್ರತಿವಾದಿಯರು ತಮಗೆ ಮೋಸ ಮಾಡಿರುವರು ಎಂದು ಹೇಳಿ ಯಾವುದೇ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿರುವುದಿಲ್ಲ. ಈ ದೂರು ದಾಖಲು ಮಾಡಿದರೇ ನಿಜಸಂಗತಿ ಗೊತ್ತಾಗುತ್ತದೆ ಎಂಬ ಕಾರಣಕ್ಕೆ ವಾದಿಯರು ಪ್ರತಿವಾದಿಯರ

ವಿರುದ್ದ ದೂರು ದಾಖಲು ಮಾಡಿರುವುದಿಲ್ಲ ಎಂದರೆ ಸರಿಯಲ್ಲ, ಆದರೆ ಈ ಸಿವಿಲ್ ದಾವೆ ದಾಖಲು ಮಾಡಿರುವರು. ವಾದಿಯರು ಪ್ರತಿವಾದಿಯರಿಗೆ ಭೇಟಿಯಾಗಿ ಮೋಸದಿಂದ ಖರೀದಿ ಪತ್ರ ಮಾಡಿಕೊಂಡಿರುವಿರಿ ದಾವಾ ಆಸ್ತಿಗಳನ್ನು ಬಿಟ್ಟುಕೊಡಿ ಅಂತ ಕೇಳಿರುವುದಿಲ್ಲ, ಏಕೆಂದರೆ ದಾವಾ ಆಸ್ತಿಗಳು ವಾದಿಯರ ಕಬ್ಜೆಯಲ್ಲಿ ಇರುವುದರಿಂದ. ಪ್ರತಿವಾದಿಯರು ನನ್ನ ತಂದೆಯ ಕಡೆಯಿಂದ ಒಂದು ಜಮೀನ್ನು ಖರೀದಿ ಮಾಡಿರುವರು ಎಂದರೆ ಸರಿ.

10. ನನ್ನ ತಂದೆಯ ಸಹೋದರಿಯರು ಮುಧೋಳದ ನ್ಯಾಯಾಲಯದಲ್ಲಿ ಪಾಲು ವಾಟ್ನಿ ದಾವೆ ದಾಖಲು ಮಾಡಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ದಾವೆಯಲ್ಲಿ ನನ್ನ ತದರೆಯ ಸಹೋದರಿಯರು ನನ್ನ ತಂದೆ ಪ್ರತಿವಾದಿಯರಿಗೆ ಮಾರಾಟ ಮಾಡಿರುವ ಜಮೀನಿನಲ್ಲಿ ಸಹ ಪಾಲು ಕೇಳಿರುವರು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ತಂದೆ ಪ್ರತಿವಾದಿಯರಿಗೆ ಜಮೀನು ಮಾರಾಟ ವಾಡಿದಾಗಿನಿಂದಲೂ ನಮ್ಮ ಮತ್ತು ಪ್ರತಿವಾದಿಯರ ನಡುವೆ ಸಂಬಂಧ ಚೆನ್ನಾಗಿ ಇರುವುದಿಲ್ಲ, ಆ ಕಾರಣಕ್ಕೆ ನಾನು ಪ್ರತಿವಾದಿಯರ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ವಾದಿಯರ ಕಡೆಯಿಂದ 2004 ರಲ್ಲಿ ಮೋಸದಿಂದ ನೊಂದಾಯಿತ ಖರೀದಿ ಪತ್ರ ಬರೆಸಿಕೊಂಡಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಕಾನೂನು ಬದ್ದವಾಗಿ ಖರೀದಿ ಪತ್ರ ನೊಂದಣಿ ಮಾಡಿಕೊಂಡಿರುವರು ಎಂದರೆ ಸರಿಯಲ್ಲ. ನನ್ನ ತಂದೆ ಪ್ರತಿವಾದಿಯರ ವಿರುದ್ದ ಜಾತಿ ನಿಂದಣೆಯ ಪ್ರಕರಣ ದಾಖಲು ಮಾಡಿರುವರು ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹಿತ ಪ್ರತಿವಾದಿಯರ ಮೇಲಿನ ದ್ವೇಷದಿಂದ ನಾನು ವಾದಿಯರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ

VIJAYAKUMAR KANNUR

Digitally signed by VIJAYAKUMAR KANNUR
Date: 2025.07.23 16:26:09 +0530